AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ಸಂಸ್ಕಾರ ಕಾದಂಬರಿಯ ತಾತ್ವಿಕ ಚರ್ಚೆ

**ರವಿಚಂದ್ರ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.
ಮೋ. ನಂ:9743991519
ಮೇಲ್: ravichandrabk1519@Gmail.com

**ಮುನ್ನೋಟ**

ಸಾಹಿತ್ಯದಲ್ಲಿ ಶ್ರೇಷ್ಠವಾದ ಕೃತಿಯೊಂದು ಬಂದರೆ, ಮೊದಲ್ಲಿದ್ದ ಎಲ್ಲಾ ಕೃತಿಗಳು ಅಲುಗಾಡುತ್ತವೆ ಹಾಗೂ ಅವುಗಳ ಸ್ಥಾನಗಳಲ್ಲಿ ಬದಲಾಗುತ್ತವೆ. ಎಂಬ ಮಾತಿನಂತೆ ಸಂಸ್ಕಾರ ಕಾದಂಬರಿ ಬಂದಾಗ ಅಂದು ಅತಿ ಹೆಚ್ಚು ಚರ್ಚೆಗೆ ಒಳಗಾದ ಹಾಗೂ ಹೆಚ್ಚು ಪ್ರಸಿದ್ಧಿ ಪಡೆದ ಕಾದಂಬರಿಯಾಗಿದೆ. ಸಂಸ್ಕಾರ ಯು. ಆರ್. ಅನಂತಮೂರ್ತಿಯವರ ಮೊದಲ ಕಾದಂಬರಿ ಇದನ್ನು 1965 ರಲ್ಲಿ ಬರ್ಮಿಂಗಂಲಿ ಇಂಗ್ಲಿಷ್ ಸಬ್ ಟೈಟಲ್ ಇಲ್ಲದ 'ಸೆವೆನ್ತ್ ಸೀಲ್' ಸಿನಿಮಾ ನೋಡಿ ಅರ್ಥ ಮಾಡಿಕೊಂಡು ಬರೆದರು. ಇದಕ್ಕೆ ಕಾರಂತರ ಪ್ರಭಾವ ಹಾಗೂ ಬಾಲ್ಯದ ಕಥೆಗಳು ಪ್ರಭಾವ ಇದೆ ಎಂದು ಅವರೆ ಹೇಳಿಕೊಂಡಿದ್ದಾರೆ. ಇದು ಕನ್ನಡದ ಶ್ರೇಷ್ಠವಾದ ಕಾದಂಬರಿಗಳ ಸಾಲಿನಲ್ಲಿ ನಿಲ್ಲುವ ಕಾದಂಬ–ರಿಯಾಗಿದೆ. ಮತ್ತು ಆಗಿನ ಸಾಹಿತ್ಯವಲಯದಲ್ಲಿ ಈ ಕಾದಂರಿಯ ವಸ್ತುವಿಷಯ ಅತಿಹೆಚ್ಚು ಚರ್ಚಿತ, ಕೋಲಾಹಲ ಎಬ್ಬಿಸಿದ ವಿಷಯವಾಗಿ–ತು. ಹಾಗೂ ಈ ಬಗೆಯ ವಸ್ತುವನ್ನು ಉಳಿದವರು ಅನುಸರಿಸಿರುವುದನ್ನು ಸಾಹಿತ್ಯದಲ್ಲಿ ಗಮನಿಸಬಹುದು ಉದಾಹರಣೆಗೆ ಕಂಬಾರರು ಜೀ. ಕೆ. ಮಾಸ್ತರರ ಪ್ರಣಯ ಪ್ರಸಂಗ, ಗಿರಡ್ಡಿಯವರ ಮಣ್ಣು, ಬಿ. ವಿ. ವೈಕುಂಠರಾಜು ಅವರ ಅಂತ್ಯ, ರಾಜಶೇಖರ ನೀರಮಾನ್ವಿ ಅವರ ಹಂಗಿನರಮನೆಯ ಹೊರಗೆ, ಗೀತಾ ನಾಗಭೂಷಣರ ಜ್ವಲಂತ, ಟಿ. ಜಿ. ರಾಘವ ಅವರ ಶ್ರಾದ್ಧ ಮುಂತಾದ ಕಥೆ ಮತ್ತು ಕಾದಂಬರಿಗಳು ಸಾವಿನ ಸಾಕ್ಷ್ಯದಲ್ಲಿ ಬದುಕನ್ನು ನಿಷ್ಠುರವಾಗಿ ಅವಲೋಕಿಸುವ ಮಹತ್ವಾಕಾಂಕ್ಷೆ ಇಟ್ಟುಕೊಂಡು ರಚಿತವಾದ ಸಾಹಿತ್ಯವಾಗಿದೆ. ಈ ಕಾದಂಬರಿ ಪ್ರಕಟವಾದ ನಂತರ ಮೆಚ್ಚಿಕೊಂಡ ಎ.ಕೆ. ರಾಮಾನುಜನ್ ಮತ್ತು ಗಿರೀಶ ಕಾರ್ನಾಡರು ಓದಿದ ನಂತರ ತಮ್ಮಲ್ಲಿ ಮತ್ಸರವುಂಟು ಮಾಡಿದ ಕೃತಿ ಎಂದು ಹೇಳಿಕೊಂಡಿದ್ದಾರೆ. ಅದನ್ನು ಎ.ಕೆ. ರಾಮಾನುಜನ್ ಇಂಗ್ಲೀಷಿಗೆ ಅನುವಾದುಸುವುದರ ಮೂಲಕ ಗಿರೀಶ ಕಾರ್ನಾಡರು ಸಂಸ್ಕಾರ ಚಲನಚಿತ್ರದಲ್ಲಿ ಪ್ರಾಣೇಶಾಚಾರ್ಯರ ಪಾತ್ರವನ್ನು ಮಾಡುವ ಮೂಲಕ ತಮ್ಮ ಆಸೆಯನ್ನು ಈಡೇರಿಸಿಕೊಂಡರು. ಎಂಬುದನ್ನು ಅವರೆ ಹೇಳಿಕೊಂಡಿದ್ದಾರೆ. ಇದು ಕಾದಂಬರಿಯ ಅಂದಿನ ಮಹತ್ವವನ್ನು ಹೇಳುವುದಕ್ಕೆ ಸಾಕ್ಷಿಯಾಗಿದೆ.

ಸಂಸ್ಕಾರ ಕಾದಂಬರಿಯು ಹೆಸರಿನಲ್ಲಿ ಹಲವು ಸ್ತರಗಳನ್ನು ಸೂಚಿಸುತ್ತದೆ. ಸಂಸ್ಕಾರ ವೈಯಕ್ತಿಕವಾಗಿರಬಹುದು ಅಥವಾ ಸಾಮಾಜಿಕವಾಗಿರಬಹುದು, ಎಂಬ ಎರಡಕ್ಕೂ ಅರ್ಥವನ್ನು ಎಡೆಮಾಡಿಕೊಡುತ್ತದೆ. ಸಂಸ್ಕಾರ ಪದದ ಅರ್ಥ ನೋಡುವುದಾದರೆ ಸಂಸ್ಕೃತಿ, ನೇಮ, ತಿದ್ದುಪಡಿ, ಧಾರ್ಮಿಕ ಕ್ರಿಯೆ ಎಂಬ ಅರ್ಥವನ್ನು ಸೂಚಿಸುತ್ತದೆ. ಸಂಸ್ಕಾರ ಕಾದಂಬರಿಯ ತಾತ್ವಿಕ ಚರ್ಚೆಗೆ ಒಳಪಡಿಸಲು ಇಲ್ಲಿ ಕಾದಂಬರಿಯನ್ನು ಪ್ರಮುಖವಾಗಿ ಒಟ್ಟು ಎರಡು ಭಾಗಗಳಾಗಿ ವಿಭಾಗಿಸಲಾಗಿದೆ. ಮೊದಲನೆಯದು ಸಮಾಜದ ನೈತಿಕ ಅಧಃಪತನ ಹಾಗೂ ಎರಡನೆಯದು ಹೊಸ ಹುಟ್ಟು ಪಡೆದ ವ್ಯಕ್ತಿ ಮತ್ತು ಸಮಾಜ ಎಂದು ವಿಭಾಗಿಸಿ ನೋಡುವ ಪ್ರಯತ್ನ ಮಾಡಿರುವೆ.

**1. ಸಮಾಜದ ನೈತಿಕ ಅಧಃಪತನ**

ಕಾದಂಬರಿಯಲ್ಲಿ ಮಾಧ್ವ ಮತ್ತು ಸ್ಮಾರ್ತ ಎಂಬ ಎರಡು ಪಂಗಡಗಳ ಅಗ್ರಹಾರದ ಹೆಸರನ್ನು ನೋಡುವುದಾದರೆ ದೂರ್ವಾಸಪುರ ಮತ್ತು ಪಾರಿಜಾತಪುರ ಎಂಬ ಹೆಸರುಗಳನ್ನು ಅವಲೋಕಿಸಿದಾಗ ದೂರ್ವಾಸಪುರ ಮೂಲ ಬ್ರಾಹ್ಮಣರು ಇರುವ ಸ್ಥಳ ಪಾರಿಜಾತಪುರ ಅಡ್ಡಪಂಕ್ತಿ ಬ್ರಾಹ್ಮಣರು ಇರುವ ಸ್ಥಳ. ಈ ಸ್ಥಳಗಳ ಹೆಸರನ್ನು ಗಮನಿಸಿದರೆ ಮೂಲ ಬ್ರಾಹ್ಮಣರ ನೀತಿಗಳಿಂದ ಕೆಟ್ಟವಾಸನೆಯುಕ್ತವಾಗಿದ್ದಾರೆ, ಸತ್ವಹೀನವಾದ, ನಿರ್ಜೀವವಾದ, ಸಂಪ್ರದಾಯದ ಭ್ರಷ್ಟತೆ, ಅವನತಿಯ ಪ್ರತಿನಿಧಿಗಳಾಗಿದ್ದಾರೆ. ಎಂಬುದನ್ನು ಧ್ವನಿಸುತ್ತದೆ ಹಾಗೂ ಪಾರಿಜಾತಪುರ ಅಡ್ಡಪಂಕ್ತಿ ಬ್ರಾಹ್ಮಣರು ಇರುವ ಸ್ಥಳವು ನೀತಿ ನಿಯಮಗಳನ್ನು ಸಡಿಲಿಸಿಕೊಂಡು ಜೀವನವನ್ನು ಸೂವಾಸನೆಯುಕ್ತವಾಗಿ ಹೇಗೆ ಜೀವಿಸಬೇಕು ಎಂಬುದನ್ನು ಧ್ವನಿಸುತ್ತದೆ. ಈ ಹೆಸರುಗಳ ಮೂಲಕವೆ ಲೇಖಕರು ಸಮಾಜದಲ್ಲಿ ಹೇಗೆ ಜೀವಿಸಬೇಕು, ವ್ಯಕ್ತಿಗೆ ಒಳಿತನ್ನು ಬಯಸದ ನಿಯಮಗಳನ್ನು ಹೇಗೆ ಮೀರಬೇಕು ಎಂಬುದನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಕಾದಂಬರಿಯ ಪ್ರಮುಖ ಸತ್ವ ಇರುವುದು ಈ ಎರಡೂ ಜಗತ್ತುಗಳ ನಡುವೆ ಉಂಟಾಗುವಂಥ ಘರ್ಷಣೆಯಿಂದ ಈ ಘರ್ಷಣೆಗೆ ಕಾರಣವಾದ ಪ್ರಮುಖ ಸನ್ನಿವೇಶವೆಂದರೆ ಅದು ನಾರಾಣಪ್ಪನ ಸಾವಿನಿಂದ ಉಂಟಾಗುವ ಅವನ ಅಂತ್ಯ ಸಂಸ್ಕಾರದ ಸಾಮಾಜಿಕ ಪ್ರಶ್ನೆ ಬಂದಾಗ ಶವ ಸಂಸ್ಕಾರಕ್ಕೆ ಹಣದ ಅವಶ್ಯಕತೆಗೆ ಚಂದ್ರಿ ತನ್ನ ಬಂಗಾರ ಕೊಡುವುದರ ಮೂಲಕ ತನ್ನ ಮಾನವೀಯತೆಯನ್ನು ತೋರಿಸುತ್ತಾಳೆ, ಆದರೆ ಅಂತ್ಯ ಸಂಸ್ಕಾರದ ಪ್ರಶ್ನೆಗೆ ಬ್ರಾಹ್ಮಣರಲ್ಲಿಯೇ ಉತ್ತರವಿಲ್ಲಾ ಹಾಗೂ ಅವರ ಧರ್ಮದ ಶ್ರೇಷ್ಠ ಪಂಡಿತರಾದ ಗುರುಗಳು ಮತ್ತು ಪ್ರಾಣೇಶಾಚಾರ್ಯರ ಯಾವ ಗ್ರಂಥಗಳಲ್ಲಿಯೂ, ಧರ್ಮಶಾಸ್ತ್ರಗಳಲಗಲ್ಲಿ ಹಾಗೂ ತಾಳೆಗರಿಗಳಲ್ಲಿಯೂ ಸಮಸ್ಯೆಗೆ ಪರಿಹಾರ ದೊರೆಯದೆ ಇದ್ದಾಗ ಆಚಾರ್ಯರು ಸಮಾಜಕ್ಕೆ ಉತ್ತರಿಸಲಾಗದೆ ಅಗ್ರಹಾರದಿಂದ ಪಲಾಯನ ಮಾಡುವುದನ್ನು ನೋಡಬಹುದು.

ನಾರಣಪ್ಪನ ಶವವನ್ನು ಚಂದ್ರಿ ಮುಸಲ್ಮಾನ ಕೇರಿಗೆ ಹೋಗಿ, ಬಂಗಡೇ ಮೀನಿನ ವ್ಯಾಪಾರ ಮಾಡುತ್ತಿದ್ದ ಅಹ್ಮದ್ ಬ್ಯಾರಿ ಕೇಳಿಕೊಂಡಾಗ ಕೈಯಲ್ಲಿ ಒಮ್ಮೆ ಕಾಸಿಲ್ಲದಾಗ ಎತ್ತುಗಳನ್ನು ಕೊಳ್ಳಲು ಸಾಲಕೊಟ್ಟ ಒಡೇರು ಅವರು ಎಂದು ನೆನೆದು ಗುಟ್ಟಾಗಿ ಗಾಡಿಕಟ್ಟಿಕೊಂಡು ಬಂದು ಶವವನ್ನೂ ಯಾರಿಗೂ ಪತ್ತೆಯಾಗದಂತೆ ಮಸಣಕ್ಕೊಯ್ದು, ಚಂದ್ರಿ ಎರಡು ತೊಟ್ಟು ಕಣ್ಣೀರು ಹಾಕಿ ಬೆಂಕಿಹಚ್ಚಿ ಬೂದಿಮಾಡಿ ಬಂದರು. ಚಂದ್ರಿ ಸೀರೆ ಮತ್ತು ಹಣವನ್ನು ತೇಗೆದುಕೊಂಡು ಕುಂದಾಪುರಕ್ಕೆ ಹೋಗುವುದು ಈ ಘಟನೆ ಬ್ರಾಹ್ಮಣ ಸಮುದಾಯವು ಒಂದು

ಹೆಣವನ್ನು ಸಕಾಲದಲ್ಲಿ ಸಂಸ್ಕಾರ ಮಾಡಲಾರದಂಥ ಸ್ಥಿತಿಯಲ್ಲಿದೆ. ಶವಸಂಸ್ಕಾರ ಮಾಡದೆ ನೀತಿ ನಿಯಮ ಎಂದು ನೋಡುವ ಗುಂಪು ಒಂದು ಕಡೆಯಾದರೆ ವೇಶ್ಯೆ ಎನಿಸಿಕೊಂಡ ಚಂದ್ರಿ ಹಾಗೂ ಅಹ್ಮದ್ ಬ್ಯಾರಿಯ ಮಾನವೀಯ ಮೌಲ್ಯ ಹಾಗೂ ವಾಸ್ತವಿಕ ಪ್ರಜ್ಞೆಯ ಮುಂದೆ ಇಲ್ಲಿಯ ಶ್ರೇಷ್ಠ ಧರ್ಮ ಕೀಳಾಗಿ ಹಾಗೂ ಶ್ರೇಷ್ಠ ವ್ಯಕ್ತಿಗಳು ಅತೀ ಚಿಕ್ಕವರಾಗಿ ಕಾಣುತ್ತಾರೆ. ಇಂತಹ ಸ್ಥಿತಿಯನ್ನು ಮೊದಲೆ ಮನಗಂಡಿದ್ದ ನಾರಣಪ್ಪ ಇದನ್ನೆಲ್ಲ ಧಿಕ್ಕರಿಸುವ ಮೂಲಕ ನವ್ಯಪ್ರಜ್ಞೆಯ ಅಸ್ತಿತ್ವವಾದಿಯಾಗಿ ಉಳಿಯುತ್ತಾನೆ.

**2. ಹೊಸ ಹುಟ್ಟು ಪಡೆದ ವ್ಯಕ್ತಿ ಮತ್ತು ಸಮಾಜ**

ಪ್ರಸ್ತುತ ಕಾದಂಬರಿಯಲ್ಲಿ ಸಂಸ್ಕೃತಿ ಮತ್ತು ಧಾರ್ಮಿಕ ಕ್ರಿಯೆಯನ್ನು ಸಾಮಾಜಿಕವಾಗಿ ಹಾಗೂ ವೈಯಕ್ತಿಕವಾಗಿ ಪರಿಷ್ಕರಿಸುವುದು ಈ ಕಾದಂಬರಿಯ ವಸ್ತುವಾಗಿದೆ. "ಈ ಕಾದಂಬರಿಯಲ್ಲಿ ಚಿತ್ರಿತವಾದ ಸಮಾಜದ ತಾತ್ವಿಕ ತಳಹದಿ ಹೆಣ್ಣು, ಹೊನ್ನು ಮತ್ತು ಮಣ್ಣು ಮನುಷ್ಯನ ಆಧ್ಯಾತ್ಮಿಕ ಪ್ರಗತಿಗೆ ಅಡ್ಡ ಬರಬಹಹುದು ಎಂಬ ನಂಬಿಕೆ. ಕಾದಂಬರಿ ಬೆಳೆದಂತೆ ಓದುಗ ಕೇಳಬೇಕಾದ ಪ್ರಶ್ನೆ ಹೆಣ್ಣು, ಹೊನ್ನು, ಮಣ್ಣುಗಳು ಸಂಕೇತಿಸುವ ಎಳೆತಗಳನ್ನು ತಡೆಯುವುದು ಸಾಧ್ಯವೇ? ಅವಶ್ಯಕವೆ? ಎಂಬುದು ಕಾದಂಬರಿಯ ಕೇಂದ್ರವ್ಯಕ್ತಿಯಾದ ಪ್ರಾಣೇಶಾಚಾರ್ಯರು ಈ ಮೂರು ಎಳೆತಗಳನ್ನು ಮೀರಿ ನಿಲ್ಲಬಲ್ಲೆ ಎಂಬ ಛಲದಿಂದ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಹೊರಟ ವ್ಯಕ್ತಿ, ಆ ಎಳೆತಗಳನ್ನು ತಡೆಯುವುದು ಸಾಧ್ಯವಿಲ್ಲ, ಬಹುಶ ಅವಶ್ಯವಿಲ್ಲ ಎಂಬ ನಂಬಿಕೆಯ ಮೇಲೆ ಕಾದಂಬರಿಯ ಪ್ರತಿನಾಯಕ ನಾರಣಪ್ಪ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾನೆ. ಆದ್ದರಿಂದ ಒಂದು ದೃಷ್ಟಿಯಿಂದ ಈ ಎರದು ವ್ಯಕ್ತಿಗಳ ಮತ್ತು ಅವರ ಪ್ರತಿನಿಧಿಸುವ ಗುಣಗಳ ಪೂರ್ಣತೆ ಕಾದಂಬರಿಯ ವಸ್ತು"(ಕೃಷ್ಣಮೂರ್ತಿ ಎಂ.ಜಿ: 1994:198).

ಒಟ್ಟಿನಲ್ಲಿ ಕಾದಂಬರಿಯಲ್ಲಿ ಚಿತ್ರಿತವಾದ ಬ್ರಾಹ್ಮಣ ಸಮಾಜದಲ್ಲಿ ಕಾಮಕ್ಕೆ ಸಾಕಷ್ಟು ಸ್ಥಾನವಿಲ್ಲಾ ಎಂಬುದನ್ನು ಪಾತ್ರಗಳು ಹೇಳುತ್ತವೆ. ನಾರಣಪ್ಪ–ಚಂದ್ರಿಯನ್ನು, ಶ್ರೀಪತಿ–ಬೆಳ್ಳಿಯನ್ನು, ದುರ್ಗಾಭಟ್ಟನಿಗೆ ಪಾರಿಜಾತಪುರದ ಎಲೆ ಅಡಿಕೆ ಅಗಿಯುವ ಸಕೇಶಿ ವಿಧವೆಯರ ಮತ್ತು ಶೆಟ್ಟರ ಹೆಂಗಸರ, ಪ್ರಾಣೇಶಾಚಾರ್ಯರು–ಚಂದ್ರಿಯನ್ನು, ಈ ರೀತಿಯ ಸಮಾಗಮವನ್ನು ವ್ಯಕ್ತಿಗೆ ಎಷ್ಟು ಅವಶ್ಯಕತೆಯಿದೆ ಎಂಬುದನ್ನು ಸೂಚಿಸುತ್ತದೆ. ಪ್ರಾಣೇಶಾಚಾರ್ಯರು ಮತ್ತು ನಾರಣಪ್ಪ ಇವರ ವಿರುದ್ಧ ಪ್ರವೃತ್ತಿಗಳು ಸಮಾಜದ ಎರಡು ನೀತಿಗಳಾಗಿ ಕಾಣುತ್ತವೆ. ಈ ಎರಡು ಪ್ರವೃತ್ತಿಗಳ ನಡುವೆ ನಡೆಯುವ ಹೋರಾಟವೆ ಈ ಕಾದಂಬರಿಯ ಪ್ರಮುಖ ಅಂಶವಾಗಿದೆ. ಯಾವ ಗೋತ್ರ? ಯಾವ ಪಂಗಡ? ಬ್ರಾಹ್ಮಣ್ಯವನ್ನು ಸಂಪೂರ್ಣ ತೊರೆದು ನಿಲ್ಲದ ಹೊರತು ಇದರಿಂದ ಸ್ವತಂತ್ರನಾಗಲಾರೆ ಎಂಬ ಮಾತು ಕಾದಂಬರಿ ಅಗ್ರಹಾರದ ಸಮಾಜವನ್ನು ಚಿತ್ರಿಸುವುದರ ಮೂಲಕ ಆ ಸಮಾಜದ ತಾತ್ವಿಕ ತಳಹದಿ ಎಷ್ಟು ಸಡಿಲವಾಗಿದೆ ಎಂಬುದನ್ನು ತೋರಿಸುತ್ತದೆ.

ಪ್ರಾಣೇಶಾಚಾರ್ಯರು ಮತ್ತು ನಾರಣಪ್ಪ ನಡುವೆ ನಡೆಯುವ ಮಾತುಕತೆಯನ್ನು ಗಮನಿಸುವುದು ಬಹಳ ಅವಶ್ಯ ಅವನು ಬ್ರಾಹ್ಮಣ್ಯ ಬಿಟ್ಟರು ಬ್ರಾಹ್ಮಣ್ಯ ಅವನನ್ನು ಬಿಡಲಿಲ್ಲ ಎಂಬ ಮಾತಿನಂತೆ "ಕೊನೆಗೆ ಗೆಲ್ಲೋದು ನಾನೋ ನೀವೋ– ನೋಡುವ. ನಾನು ಬ್ರಾಹ್ಮಣ್ಯದ ನಾಶಮಾಡ್ತೇನೆ. ಮಾಡಿಯೇ ತೀರ್ತೇನೆ. ನನ್ನ ದು:ಖವೆಂದರೆ ನಾಶ ಮಾಡೋಕ್ಕೆ ಈ ಅಗ್ರಹಾರದಲ್ಲಿ ಬ್ರಾಹ್ಮಣ್ಯಾನೇ ಉಳಿದಿಲ್ಲಲ್ಲಾಂತ– ನಿಮ್ಮೊಬ್ಬರನ್ನ ಬಿಟ್ಟರೆ, ಗರುಡ, ಲಕ್ಷ್ಮಣ, ದುರ್ಗಾಭಟ್ಟ– ಅಹಹಾ– ಎಂಥ ಬ್ರಾಹ್ಮಣರಯ್ಯ? (ಅನಂತಮೂರ್ತಿ.ಯು.ಆರ್:2020:23) ಎಂಬ ಮಾತಿನಲ್ಲಿಯೇ ಪ್ರಾಣೇಶಾಚಾರ್ಯರನ್ನು ಬಿಟ್ಟು ಉಳಿದವರು ಬದಲಾವಣೆಗೆಯಾಗಿದ್ದಾರೆ ಎಂಬುದನ್ನು ನಾರಣಪ್ಪ ಹೇಳಿಕೆಯಿಂದ ಗಮನಿಸಬಹುದು. ಹಾಗೂ "ನೀವು ರಸಭರಿತವಾದ ಪುರಾಣ ಓದುತ್ತೀರಿ : ಆದರೆ ಗೊಡ್ಡಾಗಿ ಬಾಳೂಂತ ಬೋಧಿಸ್ತೀರಿ. ಆದರೆ ನನ್ನ ಮಾತಿಗೆ ಒಂದೇ ಅರ್ಥ: ಹೆಣ್ಣಿನ ಜೊತೆ ಮಲಗು ಎಂದರೆ ಹೆಣ್ಣಿನ ಜೊತೆ ಮಲಗು; ಮೀನು ತಿನ್ನು ಎಂದರೆ ಮೀನ್ನು ತಿನ್ನು. ನಿಮಗೆಲ್ಲ ಒಂದು ಬುದ್ಧಿವಾದದ ಮಾತು ಹೇಳಲಾ, ಆಚಾರ್ಯರೆ? ಮೊದಲು ನಿಮ್ಮಗಳ ಆ ರೋಗಗ್ರಸ್ತ ಹೆಂಡಿರನ್ನ ಹೊಳೆಗೆ ನೂಕಿ. ಪುರಾಣದ ಋಷಿಗಳಂತೆ ಒಳ್ಳೆ ಮೀನಿಸಾರು ಮಾಡಬಲ್ಲ ಒಬ್ಬ ಮತ್ಸ್ಯಗಂಧೀನ್ನ ತಬ್ಬಿಕೊಂಡು ಮಲಗಿ. ಕಣ್ಣು ಬಿಟ್ಟು ನೋಡಿದಾಗ ನಿಮಗೆ ಪರಮಾತ್ಮನ ಅನುಭವ ಆಗಿರದಿದ್ದರೆ ನನ್ನ ಹೆಸರು ನಾರಣಪ್ಪನಲ್ಲ" (ಅನಂತಮೂರ್ತಿ.ಯು.ಆರ್:2020:24). ಈ ರೀತಿಯನ್ನು ಮಾತುಗಳನ್ನು ಗಮನಿಸಿದಾಗ ನಾರಣಪ್ಪನ ಮಾತುಗಳು ಬ್ರಾಹ್ಮಣ ಸಮುದಾಯದ ಕಟುಸತ್ಯವನ್ನು ಹೇಳಿದವನ್ನು ಹಾಗೂ ವಾಸ್ತವವಾಗಿ ಆ ಸಮುದಾಯದ ನಿಯಮಗಳನ್ನು ಮೀರಿ ಸಮಾಜದ ಎಲ್ಲರೊಂದಿಗೆ ವಾಸ್ತವವಾಗಿ ಬಾಳಬೇಕು ಎಂಬುದನ್ನು ಹೇಳಿದವನು. ಹಾಗೂ ಪ್ರಾಣೇಶಾಚಾರ್ಯರರಿಗರ ಈ ಮಾತುಗಳಿಂದ ತಕ್ಷಣ ಪರಿಣಾಮ ಬೀರದೆ ನಾರಣಪ್ಪನ ಸಾವಿನ ವಿಷಯದಲ್ಲಿ ಶವಸಂಸ್ಕಾರದ ಬಗ್ಗೆ ಧರ್ಮಶಾಸ್ತ್ರನೆಲ್ಲ ಬುಡ ಮೇಲು ಮಾಡಿ ಹಾಗೂ ಎಲ್ಲ ತಾಳೆಗರಿ ಗ್ರಂಥಗಳನ್ನೂ ಆಮೂಲಾಗ್ರ ಶೋಧಿಸಿದ್ದಾಯಿತು ತನ್ನ ಅಂತರಂಗಕ್ಕೆ ಒಪ್ಪಿಗೆಯಾಗುವಂತಹ ಉತ್ತರ ಮಾತ್ರ ಇಲ್ಲ ಎಂದು ತಿಳಿದಾಗ ನಾರಣಪ್ಪನೇ ಗೆದ್ದಂತೆ, ನಾವು(ಬ್ರಾಹ್ಮಣ ನಿಯಮಗಳು) ಸೋತಹಾಗೆ ಎಂದು ಕೊನೆಗೆ ಮಾರುತಿ ಗುಡಿಗೆ ಹೋಗಿ ಮಾರುತಿ ವಿಗ್ರಹದ ಮುಂದೆ ಕುಳಿತು ಧ್ಯಾನಿಸಿದರು ಸಹಾ, ದೇವರು ಬಲಗಡೆಯಾಗಲಿ ಅಥವಾ ಎಡಗಡೆಯಾಗಲಿ ಪ್ರಸಾದ ದೊರೆಯದೆ ಇದ್ದಾಗ ಅಂದು ರಾತ್ರಿ ಪ್ರಾಣೇಶಾಚಾರ್ಯರು ಚಂದ್ರಿಯ ತೋಳಲ್ಲಿ ಹೆಣ್ಣಿನ ಸುಖ ಅನುಭವಿಸಿದಾಗ ಸಹ ಪ್ರಕೃತಿಯ ಜಯವನ್ನು ಕಾಣುತ್ತೇವೆ. ಇಲ್ಲಿ ಅರ್ಥಹೀನ ಸಂಸ್ಕೃತಿಯ ಅನುಕರಣೆ ಮತ್ತು ಗೊಡ್ಡು ಧರ್ಮವೊಂದರ ಒಡಕುಗಳನ್ನು ಅನಂತಮೂರ್ತಿಯವರು ಬಹಳ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಪ್ರಾಣೇಶಾಚಾರ್ಯ ಶಾಸ್ತ್ರಜ್ಞಾನಕ್ಕಿಂತ ನಾರಣಪ್ಪನ ಕಾಲಜ್ಞಾನ ಹೆಚ್ಚು ಅಧಿಕೃತವಾಗುವಲ್ಲಿ ವ್ಯವಸ್ಥೆಯ ಬಿರಿಕು ನಿಚ್ಚಳವಾಗುತ್ತ ಹೋಗುತ್ತದೆ. ನಾವು ಯಾವುದು ನೈತಿಕ ಅಧಃಪತನ ಎಂದು ಕರಿಯುತ್ತೇವೆಯೋ ಅಂತಹ ನೈತಿಕ ಅಧಃಪತನದಲ್ಲೇ ಪ್ರಾಣೇಶಾಚಾರ್ಯರ ಮರು ಹುಟ್ಟು ಅಥವಾ ಬದಲಾವಣೆ ಇದೆ ಎಂಬುದನ್ನು ಗಮನಿಸಬೇಕು.

ಪ್ರಾಣೇಶಾಚಾರ್ಯರು ಎಲ್ಲವನ್ನು ತೊರೆದು ನಡೆಯುವಾಗ ಆಲೋಚಿಸುವ ಚಿಂತನೆಗಳು ಪ್ರಮುಖವಾಗಿ ಗಮನಿಸಬೇಕಾಗಿದೆ "ಚಂದ್ರಿಯನ್ನರಸಿಕೊಂಡು ಕುಂದಾಪುರಕ್ಕೆ ಹೋಗಿಬಿಡಬೇಕೆನ್ನಿಸಿತು. ತರ್ಕ ಶುದ್ಧವಾಗಿ ತನ್ನನ್ನು ಪರೀಕ್ಷಿಸಿಕೊಳ್ಳುವ ಚಿತ್ತವೃತ್ತಿಗೆ ಭಂಗ ಬಂದಂತಾಯಿತು. ಈಗ ನಾನು ಅವಳನ್ನು ಹುಡುಕಿಕೊಂಡು ಹೋಗಿ ಅವಳ ಸಂಗ ಮಾಡಿದರೆ ನನ್ನ ಕ್ರಿಯೆಗೆ ನಾನೇ ಸಂಪೂರ್ಣ ಜವಾಬ್ದಾರನಾಗಿಬಿಟ್ಟಂತಲ್ಲವೆ ಎನ್ನಿಸಿತು. ಆಗಲಾದರೂ ಹೀಗೆ ಅಕಸ್ಮಾತ್ ಹೊರಳಿಬಿಟ್ಟಿದ್ದರ ಸ್ಮೃತಿಯ ಸಂಕಟದಿಂದ ಪಾರಾಗಬಹುದು. ಇದು

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ನಾನು, ನನ್ನದು, ನನ್ನಿಂದ ಸೃಷ್ಟಿತವಾದ ನನ್ನ ಹೊಸ ಸತ್ಯ, ಹೊಸ ವ್ಯಕ್ತಿತ್ವ ಎಂದು ದೈವವನ್ನು ಗಟ್ಟಿಯಾಗಿ ನೋಡಬಹುದು. ಈಗ ನನ್ನ ವ್ಯಕ್ತಿತ್ವ ರೂಪಭ್ರಷ್ಟವಾಗಿ, ಹೊಸ ರೂಪ ಪಡೆಯದೆ, ಗರ್ಭಕೋಶದಿಂದ ಅವಸರದಲ್ಲಿ ಹೊರಗೆ ತೆಗೆದ ರಾಕ್ಷಸ–ಪಿಂಡದಂತಾಗಿದೆ. ಕಾಡಿನಲ್ಲಿ ಕತ್ತಲಿನಲ್ಲಿ ಆ ಮುಹೂರ್ತ ಅಕಸ್ಮಾತ್ತಾಗಿ ಒದಗಿಬಂತೆಂಬ ನನ್ನ ನಂಬಿಕೆಯನ್ನೂ ನಾನು ನಿಚ್ಚಳವಾಗಿ ಪರೀಕ್ಷಿಸಬೇಕು. ಅಕಸ್ಮಾತ್ತಾಗಿ ಒದಗಿ ಬಂತೆಂಬುದು ನಿಜ. ನಾನಾಗಿ ಬಯಸಿ ಅದನ್ನು ಪಡೆಯಲಿಲ್ಲೆಂಬುದು ನಿಜ."(ಅನಂತಮೂರ್ತಿ.ಯು.ಆರ್:2020:78) ಹೇಳಿಕೆಯು ಪ್ರಾಣೇಶಾಚಾರ್ಯರು ಪಶ್ಚಾತ್ತಾಪವನ್ನು ಮತ್ತು ಆಲೋಚನೆಯಲ್ಲಿಯ ಬದಲಾವಣೆಯನ್ನು ಸಹಾ ಸೂಚಿಸುತ್ತದೆ.

ಪ್ರಾಣೇಶಾಚಾರ್ಯರು ಪದ್ಮಾವತಿಯ ಮನೆಗೆ ಹೋಗುವುದು, ಪುಟ್ಟನ ಜೊತೆಗೆ ತಿರುಗುವುದು ಹಾಗೂ ಅವನಿಂದ ಸಾಮಾಜಿಕ ಮಾಹಿತಿಯನ್ನು ಪಡೆದು ಪುಟ್ಟ ಪ್ರಾಣೇಶಾಚಾರ್ಯರಿಗೆ ಕೆಲವೊಂದು ಸಾರಿ ಗುರುವಾಗಿ ಕಂಡ ಹಾಗೂ ಸಾಮಾಜಿಕವಾಗಿ ಎಲ್ಲರ ಜೊತೆಗೆ ಊಟ ಮಾಡುವುದು ಬದಲಾದ ಪ್ರಾಣೇಶಾಚಾರ್ಯರನ್ನು ಗುರುತ್ತಿಸುತ್ತದೆ. "ಈ ಪುಟ್ಟ ಮಾಲೇರವನ್ನು ಎಂಬ ವಿವರವೂ ಕಾದಂಬರಿಯ ರಾಚನಿಕ ವಿನ್ಯಾಸದಲ್ಲಿ ಅರ್ಥಪೂರ್ಣವಾಗಿ ಕಾಣುತ್ತದೆ. ಅನಂತಮೂರ್ತಿ ಹೇಳುತ್ತಾರೆ 'ಮಾಲೇರು ಅಂದರೆ ಶೂದ್ರ ಮತ್ತು ಬ್ರಾಹ್ಮಣ ಸೇರಿ ಹುಟ್ಟಿದವನು.. ಹಾಗೆ ಹುಟ್ಟಿದವನು ಹೊರಜಾತಿ ಎಂದು ನಮ್ಮ ತಿಳುವಳಿಕೆ. ಅತ್ತ ಬ್ರಾಹ್ಮಣನೂ ಅಲ್ಲ, ಇತ್ತ ಶೂದ್ರನೂ ಅಲ್ಲ'. ಇಂಥವನು ಬ್ರಾಹ್ಮಣರಾದ ಪ್ರಾಣೇಶಾಚಾರ್ಯರನ್ನು ಶೂದ್ರರನ್ನಾಗಿ ಮಾಡಿ ಅವರನ್ನು ಅವರ ಸಂಕೋಚಗಳಿಂದ ಬಿಡಿಸಿದ್ದು ಕಾದಂಬರಿಯ ಒಟ್ಟು ತರ್ಕಕ್ಕೆ ಅನುಗುಣವಾಗಿಯೇ ಇದೆ. ನಾರಣಪ್ಪ ಅಗ್ರಹಾರದೊಳಗೆ ಮಾಡಿದ್ದನ್ನೆಲ್ಲ ಪ್ರಾಣೇಶಾಚಾರ್ಯರು ಅಗ್ರಹಾರದ ಹೊರಗೆ ಮಾಡುತ್ತಾರೆ. ಅಂದರೆ ತಾವೇ ನಾರಣಪ್ಪನಾಗುತ್ತಾರೆ."(ಟಿ.ಪಿ.ಅಶೋಕ:2014:101) ಒಟ್ಟಿನಲ್ಲಿ ಅಗ್ರಹಾರದಿಂದ ಹೊರಟ ಕಥೆ ಮತ್ತೆ ಅಗ್ರಹಾರದ ಕಡೆಗೆ ನಡೆಯುವುದು ಪ್ರಾಣೇಶಾಚಾರ್ಯ ಎಂಬ ಮನುಷ್ಯನ ಬದುಕಿನ ಮೂಲಭೂತ ಅವಶ್ಯಕತೆಗಳ ಕುರಿತು ತೀರ್ಮಾನವನ್ನು ಪ್ರಕಟಿಸುತ್ತದೆ. ಮಾಲೇರ ಪುಟ್ಟನಂತಹ ವ್ಯಕ್ತಿಗೂ, ಅತಿ ಚಿಕ್ಕವನಾಗಿ ಕಾಣುವ ಪ್ರಾಣೇಶಾಚಾರ್ಯರು ಹೊಂದಿದ ಸಂಸ್ಕಾರ ಎಂತದ್ದು ಎಂಬ ಪ್ರಶ್ನೆ ಎದುರಾಗುತ್ತದೆ ಅಗ್ರಹಾರದಿಂದ ಹೊಸತನಕ್ಕಾಗಿ ಹೊರಡುವ ಪ್ರಾಣೇಶಾಚಾರ್ಯ ಮತ್ತೆ ಅಗ್ರಹಾರ ಸೇರುವ ಪ್ರಕ್ರಿಯೆಯನ್ನು ಬದಲಾದ ಪ್ರಾಣೇಶಾಚಾರ್ಯರನ್ನು ಮತ್ತು ಬದಲಾದ ಸಮಾಜವನ್ನು ಸೂಚಿಸುತ್ತದೆ. ಈ ರೀತಿಯ ವಸ್ತುವನ್ನು ಆಯ್ಕೆಮಾಡಿಕೊಂಡು ಅನಂತಮೂರ್ತಿ ಬರೆಯಲು ಸಾಧ್ಯವಾಗಿದ್ದು ಆ ರೀತಿಯ ನಿಯಮಗಳನ್ನು ಅವರು ಅತಿಹತ್ತಿರದಿಂದ ನೋಡಿದ್ದಕ್ಕೆ ಬ್ರಾಹ್ಮಣ ಸಮುದಾಯದ ಅನಿಷ್ಠನಿಯಮಗಳನ್ನು ಈ ರೀತಿಯಾಗಿ ವಿವರಿಸಲು ಸಾಧ್ಯವಾಗಿರಬಹುದು ಎಂದು ಅನ್ನಿಸುತ್ತದೆ.

**ಪರಾಮರ್ಶನ ಸಾಹಿತ್ಯ**


1. ಅನಂತಮೂರ್ತಿ.ಯು.ಆರ್, 2020, ಸಂಸ್ಕಾರ, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ ಕರ್ನಾಟಕ.
2. ಅಶೋಕ. ಓ.ಪಿ, 2014, ಅನಂತಮೂರ್ತಿ ವಾಙ್ಮಯ, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ ಕರ್ನಾಟಕ.
3. ಕೃಷ್ಣಮೂರ್ತಿ.ಎಂ.ಜಿ, 1994, ಕೃತಿ ಸಂಸ್ಕೃತಿ, ಋಜುವಾತು ಪ್ರಕಾಶನ ಮೈಸೂರು.
4. ನಾಯಕ.ಜಿ.ಎಚ್, 2011, ಮೌಲ್ಯ ಮಾರ್ಗ ಸಂ–ಒಂದು, ಸಿರಿವರ ಪ್ರಕಾಶನ ಬೆಂಗಳೂರು.
5. ಶೂದ್ರ ಶ್ರೀನಿವಾಸ್,2011, ಯು. ಆರ್. ಅನಂತಮೂರ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.